## ಸುದ್ದಿ ಸಂಚಯ

# ರಾಮಕೃಷ್ಣ ಮಿಷನ್ನಿನ 113ನೇ ವಾರ್ಷಿಕ ಸಭೆಯ ಸಂಕ್ಷಿಪ್ತ ವರದಿ

**ರಾ**ಮಕೃಷ್ಣ ಮಿಷನ್ನಿನ **113ನೇ ವಾರ್ಷಿಕ ಸಭೆ**ಯು 2022ರ ಡಿಸೆಂಬರ್ 18ರ ಭಾನುವಾರದಂದು ಮಧ್ಯಾಹ್ನ 3.30ಕ್ಕೆ ಬೇಲೂರು ಮಠದಲ್ಲಿ ನಡೆಯಿತು. ಈ ಸಭೆಯಲ್ಲಿ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸುವೀರಾನಂದಜಿಯವರು '2021-22ನೇ ವಿತ್ತೀಯ ವರ್ಷದ ಅವಧಿಯಲ್ಲಿ ನಡೆದ ರಾಮಕೃಷ್ಣ ಮಿಷನ್ನಿನ ಕಾರ್ಯಗಳ ಬಗೆಗಿನ ವರದಿ'ಯನ್ನು ಮಂಡಿಸಿದರು. ಈ ವರದಿಯ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ:

**೧) ಪ್ರಶಸ್ತಿಗಳು ಹಾಗೂ ಮನ್ನಣೆಗಳು:** 1) ಭಾರತ ಸರ್ಕಾರದ ನ್ಯಾಷನಲ್ ಇನ್‌ಸ್ಟಿಟ್ಯೂಷನಲ್ ಅಂಡ್ ಅಕ್ರೆಡಿಟೇಶನ್ ಕೌನ್ಸಿಲ್ (NAAC) ಸಂಸ್ಥೆಯು ಬೇಲೂರು ಮಠದ **ಶಾರದಾಪೀಠ** ವಸತಿ ಕಾಲೇಜಿಗೆ (ಪಶ್ಚಿಮ ಬಂಗಾಳ) A++ ಸ್ಥಾನ, ಹಾಗೂ **ನರೇಂದ್ರಪುರ** ವಸತಿ ಕಾಲೇಜಿಗೆ (ಪಶ್ಚಿಮ ಬಂಗಾಳ) A+ ಸ್ಥಾನವನ್ನು ನೀಡಿ, ಎರಡೂ ಸಂಸ್ಥೆಗಳಿಗೆ ಈ ಸ್ಥಾನವನ್ನು ಐದು ವರ್ಷಗಳ ವರೆಗೆ ಮುಂದುವರಿಸಿದೆ. 2) ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ನ್ಯಾಷನಲ್ ಇನ್‌ಸ್ಟಿಟ್ಯೂಷನಲ್ ರ‍್ಯಾಂಕಿಂಗ್ ಫ್ರೇಂವರ್ಕ್ (NIRF) ಸಂಸ್ಥೆಯು 2021ನೇ ವರ್ಷಕ್ಕಾಗಿ ನಮ್ಮ ಈ ಕೆಳಗಿನ ನಾಲ್ಕು ಪದವಿ ಕಾಲೇಜುಗಳಿಗೆ ಉತ್ತಮ ಸ್ಥಾನವನ್ನು ನೀಡಿದೆ: ಬೇಲೂರು ಮಠದ **ಶಾರದಾಪೀಠ** (ಪಶ್ಚಿಮ ಬಂಗಾಳ) ವಸತಿ ಕಾಲೇಜಿಗೆ 5ನೇ ಸ್ಥಾನ, **ರಹರಾ** ವಿವೇಕಾನಂದ ಸೆಂಟಿನರಿ ಕಾಲೇಜು (ಪಶ್ಚಿಮ ಬಂಗಾಳ) 15ನೇ ಸ್ಥಾನ, **ನರೇಂದ್ರಪುರ** ವಸತಿ ಕಾಲೇಜಿಗೆ(ಪಶ್ಚಿಮ ಬಂಗಾಳ) ಸಂಸ್ಥೆಗಳಿಗೆ 21ನೇ ಸ್ಥಾನ ಹಾಗೂ **ಕೊಯಮತ್ತೂರು** ಕಲಾ ಹಾಗೂ ವಿಜ್ಞಾನ ಕಾಲೇಜಿಗೆ (ತಮಿಳುನಾಡು) 48ನೇ ಸ್ಥಾನ. 3) ಭಾರತ ಸರ್ಕಾರದ ' NITI ಆಯೋಗ'ವು **ವಿವೇಕನಗರ** ಪ್ರೌಢಶಾಲೆ, ಅಗರ್ತಲ (ತ್ರಿಪುರ) ಇದಕ್ಕೆ 'ಸೈಬರ್ ಸ್ಮಾರ್ಟ್ ಸ್ಕೂಲ್' ಬಿರುದನ್ನು ನೀಡಿದೆ.

**೨) ರಾಮಕೃಷ್ಣ ಮಿಷನ್ನಿನ ಹೊಸ ಶಾಖಾಕೇಂದ್ರಗಳು:** 1) ರಾಮಕೃಷ್ಣ ಮಿಷನ್ನಿನ ಹೊಸ ಕೇಂದ್ರಗಳು : ಪಶ್ಚಿಮ ಬಂಗಾಳದ **ಕೃಷ್ಣನಗರ, ನವದ್ವೀಪ, ಸೋಮ್‌ಸರ್**, ಹಾಗೂ ಅಸ್ಸಾಂನ **ದಿಗ್‌ಬಾಯ್**. ೨) ರಾಮಕೃಷ್ಣ ಮಠದ ಹೊಸ ಕೇಂದ್ರಗಳು: **ಅಹಮದಾಬಾದ್** (ಗುಜರಾತ್), **ಮಾದಿಹಳ್ಳಿ** (ಕರ್ನಾಟಕ) ಹಾಗೂ **ತಂಜಾವೂರು** (ತಮಿಳುನಾಡು).

**೩.) ಚಟುವಟಿಕೆಗಳು: ಭಾರತದಲ್ಲಿ**

ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ಸಂಸ್ಥೆಗಳು ತಮ್ಮ **216** ಕೇಂದ್ರಗಳ ಹಾಗೂ ಉಪ-ಕೇಂದ್ರಗಳ ಮೂಲಕ ವಿವಿಧ ಸೇವಾಕಾರ್ಯಗಳಿಗಾಗಿ 943.18 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದೆ. ವಿವರಗಳು ಈ ಕೆಳಗಿನಂತಿವೆ:

| ಸೇವಾಕ್ಷೇತ್ರ | ಉಪಯೋಗ ಪಡೆದವರ ಸಂಖ್ಯೆ (ಲಕ್ಷಗಳಲ್ಲಿ) | ಖರ್ಚು ಮಾಡಿದ ಮೊತ್ತ (ಕೋಟಿ ರೂ.) |
|---|---|---|
| ಪರಿಹಾರ ಹಾಗೂ ಪುನರ್ವಸತಿ | 15.95 | 26.20 |
| ಸಾಧಾರಣ ಕಲ್ಯಾಣಯೋಜನೆ | 24.77 | 27.62 |
| ವೈದ್ಯಕೀಯ | 57.09 | 337.75 |
| ಶೈಕ್ಷಣಿಕ | 2.61 | 451.44 |
| ಗ್ರಾಮೀಣಾಭಿವೃದ್ಧಿ | 29.80 | 87.16 |
| ಸಾಹಿತ್ಯ ಪ್ರಕಟಣೆ | | 13.01 |
| | **ಒಟ್ಟು** | **943.18** |

**೪) ಚಟುವಟಿಕೆಗಳು: ವಿದೇಶಗಳಲ್ಲಿ**

1) ನ್ಯೂಜಿಲ್ಯಾಂಡ್‌ನ ಆಕ್‌ಲ್ಯಾಂಡ್‌ನಲ್ಲಿ ರಾಮಕೃಷ್ಣ ಮಠದ ಕೇಂದ್ರವು ಆರಂಭವಾಯಿತು.

2) ಭಾರತದ ಹೊರಗಿನ 24 ದೇಶಗಳಲ್ಲಿರುವ ರಾಮಕೃಷ್ಣ ಮಠ ಮತ್ತು ಮಿಷನ್ನಿನ 97 ಕೇಂದ್ರ ಹಾಗೂ ಉಪಕೇಂದ್ರಗಳು ವೇದಾಂತ ತತ್ತ್ವದ ಪ್ರಚಾರಕಾರ್ಯ ಹಾಗೂ ವಿವಿಧ ಸೇವಾಕಾರ್ಯಗಳಲ್ಲಿ ತೊಡಗಿವೆ.

ರಾಮಕೃಷ್ಣ ಮಿಷನ್ ಮತ್ತು ರಾಮಕೃಷ್ಣ ಮಿಷನ್ನಿನ ಸೇವಾಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಅತ್ಯಂತ ಕಾಳಜಿಯಿಂದ ಅಮೂಲ್ಯವಾದ ಬೆಂಬಲ ಹಾಗೂ ಸಹಕಾರ ನೀಡಿರುವ ನಮ್ಮ ಸದಸ್ಯರಿಗೂ, ಹಿತೈಷಿಗಳಿಗೂ, ಭಕ್ತರಿಗೂ ಈ ಸಂದರ್ಭದಲ್ಲಿ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ.

(ಸ್ವಾಮಿ ಸುವೀರಾನಂದ)

18 ಡಿಸೆಂಬರ್, 2022 — ಪ್ರಧಾನ ಕಾರ್ಯದರ್ಶಿ, ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್

Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020